4003/7011/5031/6011

First Semester 3 Yr. LL.B./II Semester 5 Year B.Com. LL.B./B.A.LL.B. (Maj.-Min.)/B.B.A.LL.B. Examination, Oct./Nov. 2021
LAW OF TORTS

Duration : 3 Hours Max. Marks : 80

Instructions : 1. Answer any five questions from group (a) each question carries 10 marks.

2. Answer any five questions from group (b) each question carries 6 marks.

3. Answers should be written either in English or Kannada completely.

Q. No. 1. (a) Define Tort and explain the essential elements of Tort with decided cases. Marks : 10

ಅಪಕೃತ್ಯವನ್ನು ವ್ಯಾಖ್ಯಾನಿಸಿ ಮತ್ತು ಅಪಕೃತ್ಯದ ಅವಶ್ಯಕ ಘಟಕಾಂಶಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 1. (b) Write short notes on : Marks : 6

ಲಘು ಟಿಪ್ಪಣಿ ಬರೆಯಿರಿ :

Ubi jus ibi remedium.

ಎಲ್ಲಿ ಹಕ್ಕಿದೆಯೋ ಅಲ್ಲಿ ಪರಿಹಾರವಿದೆ.

Q. No. 2. (a) Distinguish between tort and crime, tort and contract. Marks : 10

ಅಪಕೃತ್ಯಕ್ಕೂ ಮತ್ತು ಅಪರಾಧಕ್ಕೂ ಹಾಗೂ ಅಪಕೃತ್ಯಕ್ಕೂ ಮತ್ತು ಕರಾರಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.

Q. No. 2. (b) Write short notes on : Marks : 6

ಲಘು ಟಿಪ್ಪಣಿ ಬರೆಯಿರಿ :

Injuria sine damnum.

ಇಂಜುರಿಯಾ ಸೈನೆ ಡಾಮ್ನಮ್.

Q. No. 3. (a) Enumerate and examine the general defences to an action in Tort. Marks : 10

ಅಪಕೃತ್ಯಗಳ ಕ್ರಮಗಳಿಗಿರುವ ಸಾಮಾನ್ಯ ರಕ್ಷಣೆಗಳನ್ನು ನಮೂದಿಸಿ ಮತ್ತು ವಿವರಿಸಿ.

P.T.O.

Q. No. 3. (b) Rajani and Ravi, were customers in a shop in which glass in the sky light fell on Ravi and injured him. Rajani in trying to save her husband sprained her leg as to bring about a major surgery. Decide. Marks : 6

ರಜನಿ ಮತ್ತು ರವಿ ಒಂದು ಅಂಗಡಿಯಲ್ಲಿ ಗ್ರಾಹಕರಾಗಿದ್ದಾಗ, ಆ ಅಂಗಡಿಯ ಮೇಲಿದ್ದ ಬೆಳಕು ಹೆಂಚಿನ ಗಾಜು ರವಿಯ ಮೇಲೆ ಬಿದ್ದು ಆತ ಗಾಯಗೊಂಡನು. ಗಾಜು ಬೀಳದಂತೆ ರಜನಿ ಪ್ರಯತ್ನ ಪಡುವಷ್ಟರಲ್ಲಿ ಜಾರಿ ಕಾಲಿಗೆ ಪೆಟ್ಟು ಬಿದ್ದು ಆಕೆಯ ಕಾಲಿಗೆ ಶಸ್ತ್ರಚಿಕಿತ್ಸೆ ಅಗತ್ಯವಾಯಿತು. ನಿರ್ಧರಿಸಿ.

Q. No. 4. (a) Explain the liability of the master for the tort committed by his servant. Marks : 10

ತನ್ನ ಸೇವಕರಿಂದಾದ ಅಪಕೃತ್ಯಗಳಿಗೆ ಯಜಮಾನನ ಹೊಣೆಗಾರಿಕೆಯನ್ನು ವಿವರಿಸಿ.

Q. No. 4. (b) Raghu and Sharma's dogs were fighting. Mr. Sharma was beating them in order to separate them and Raghu was looking on Sharma rising the stick over his shoulder in order to strike the dogs, accidentally hit Raghu in the eye. Can Raghu seek compensation ? Marks : 6

ರಘು ಮತ್ತು ಶರ್ಮರಿಗೆ ಹೊಂದಿದ ಎರಡು ನಾಯಿಗಳು ಜಗಳವಾಡುತ್ತಿದ್ದವು. ಶರ್ಮ ಒಂದು ಕೋಲಿನಿಂದ ಅವುಗಳನ್ನು ಬೇರ್ಪಡಿಸಲು ಹೊಡೆಯಲೆತ್ನಿಸುತ್ತಿದ್ದನು ಮತ್ತು ರಘು ಅಲ್ಲೆ ಇದ್ದು ನೋಡುತ್ತಿದ್ದನು. ಶರ್ಮನು ನಾಯಿಗಳನ್ನು ಬೇರ್ಪಡಿಸಲೆಂದು ಕೋಲನ್ನೆತ್ತಿದ್ದಾಗ ಆಕಸ್ಮಾತಾಗಿ ರಘುವಿಗೆ ತಾಗಿ ಅವನ ಕಣ್ಣಿಗೆ ಗಾಯವಾಯಿತು. ರಘು ಪರಿಹಾರ ಕೇಳಬಹುದೇ ?

Q. No. 5. (a) What is nuisance ? Distinguish between private and public nuisance. Marks : 10

'ಉಪದ್ರವ' ಎಂದರೇನು ? ಸಾರ್ವಜನಿಕ ಉಪದ್ರವ ಮತ್ತು ಖಾಸಗಿ ಉಪದ್ರವಗಳನ್ನು ವ್ಯತ್ಯಾಸಿಸಿ.

Q. No. 5. (b) The defendants carried on the business of bone menure manufacture. For that purpose they had heep of bones in their premises which caused large number of rats assembled there. They made their way to plaintiffs land and ate his corn causing loss to him. Can he claim compensation ? Marks : 6

ಪ್ರತಿವಾದಿಯೂ ಮೂಳೆ ಗೊಬ್ಬರ ಮಾಡುವ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು. ಅದಕ್ಕಾಗಿ ಮೂಳೆ ರಾಶಿಯನ್ನು ಜಮೆ ಮಾಡಿಟ್ಟುಕೊಂಡಿದ್ದರು. ಅದರಲ್ಲಿ ಬಹಳಷ್ಟು ಇಲಿಗಳು ಬಂದುದಲ್ಲದೆ, ಅವು ವಾದಿಯ ಜಮೀನಿನಲ್ಲಿದ್ದ ಕಾಳುಗಳನ್ನು ತಿಂದು, ಆತನಿಗೆ ಅಪಾರ ನಷ್ಟ ಉಂಟಾಯಿತು. ವಾದಿಯು ಪರಿಹಾರ ಪಡೆಯಬಹುದೇ ?

Q. No. 6. (a) Explain the principle of strict liability with exceptions. Support your answer with appropriate cases. Marks : 10

'ಖಚಿತ ಹೊಣೆಗಾರಿಕೆ'ಯನ್ನು ಅದರ ಅಪವಾದಗಳೊಂದಿಗೆ ವಿವರಿಸಿ. ಸಮರ್ಪಕ ಪ್ರಕರಣಗಳೊಂದಿಗೆ, ನಿಮ್ಮ ಉತ್ತರವನ್ನು ಸಮರ್ಥಿಸಿ.

Q. No. 6. (b) The defendant, a vegetable vendor sold only one kg potatoes per ration book, when there was a scarcity of potatoes. Queues of customers at the defendants shop extended in the highway in front of neighboring shop. Decide. Marks : 6

ಪ್ರತಿವಾದಿಯು ತರಕಾರಿ ಅಂಗಡಿಯನ್ನು ಹೊಂದಿದ್ದು, ಆಲೂಗೆಡ್ಡೆಯ ಅಭಾವ ಸನ್ನಿವೇಶಗಳಲ್ಲಿ ಗ್ರಾಹಕರಿಗೆ, ಪಡಿತರ ಚೀಟಿ ಇದ್ದವರಿಗೆ ಮಾತ್ರ ಒಂದು ಕಿಲೋ ಗ್ರಾಂ ಆಲೂಗೆಡ್ಡೆಯನ್ನು ಕೊಡುತ್ತಿದ್ದನು. ಹಾಗಾಗಿ ಅವನ ಅಂಗಡಿಯ ಮುಂದೆ ಉದ್ದವಾದ ಸರದಿ ಸಾಲು ಇದ್ದು ಉಳಿದ ಅಂಗಡಿಗಳ ಮುಂದೂ ಬಂದು ತೊಂದರೆಯಾಗುತ್ತಿತ್ತು. ನಿರ್ಧರಿಸಿ.

Q. No. 7. (a) What is false imprisonment ? Explain the essentials of false imprisonment with appropriate cases. Marks : 10

ಮಿಥ್ಯ ಬಂಧೀಕರಣ ಎಂದರೇನು ? ಮಿಥ್ಯ ಬಂಧೀಕರಣ ಅವಶ್ಯಕ ಅಂಶಗಳನ್ನು ಸೂಕ್ತ ಪ್ರಕರಣಗಳೊಂದಿಗೆ ವಿವರಿಸಿ.

Q. No. 7. (b) An agriculturist did not pay his arrears of land revenue. The village accountant who had to collect it, insisted on immediate payment and in case he couldn't give, the agriculturist had to give his ear rings. Village accountant sent for the village goldsmith to do it. But in the mean time the agriculturist could pay the money in cash but sued the village accountant for damages. Decide. Marks : 6

ಓರ್ವ ರೈತನು ಭೂಕಂದಾಯವನ್ನು ಕೊಡದೆ ಬಾಕಿ ಉಳಿಸಿಕೊಂಡಿದ್ದನು. ಆ ಕಂದಾಯವನ್ನು ಈ ಕೂಡಲೇ ಪಾವತಿಸದಿದ್ದರೆ, ಕಿವಿಯ ರಿಂಗನ್ನು ತೆಗೆದು ಕೊಡಬೇಕಾಗಬಹುದು ಎಂದು ಗ್ರಾಮ ಲೆಕ್ಕಿಗನು ಆ ರೈತನಿಗೆ ಹೇಳಿದ ಕೂಡಲೇ ಅಲ್ಲಿಗೆ ಅಕ್ಕಸಾಲಿಗನನ್ನು ಬರ ಹೇಳುವನು. ಅಷ್ಟರಲ್ಲಿ ರೈತನು ಕಂದಾಯ ಹಣವನ್ನು ಸಂದಾಯ ಮಾಡುವನು ಮತ್ತು ಗ್ರಾಮ ಲೆಕ್ಕಿಗನ ಮೇಲೆ ದಾವೆ ಹೂಡುವನು. ನಿರ್ಧರಿಸಿ.

Q. No. 8. (a) Define "Assault" and distinguish it from battery. Marks : 10

''ಹಲ್ಲೆ'' ಯನ್ನು ವ್ಯಾಖ್ಯಾನಿಸಿ ಮತ್ತು ಪ್ರಹಾರ ಮತ್ತು ಹಲ್ಲೆಗಿರುವ ವ್ಯತ್ಯಾಸಗಳನ್ನು ತಿಳಿಸಿ.

Q. No. 8. (b) Plaintiff brought a ticket for unreserved seat in the defendants theatre and was watching the movie. He was forcibly removed from there before the movie was over under the mistaken impression that he had not paid for it. He seeks compensation. Decide. Marks : 6

ವಾದಿಯು ಕಾಯ್ದಿರಿಸಲ್ಪಟ್ಟಿಲ್ಲದ ಸಿನಿಮಾ ಟಿಕೇಟನ್ನು ಕೊಂಡು ಸಿನಿಮಾ ನೋಡುತ್ತಿರುತ್ತಾನೆ. ಆ ಥಿಯೇಟರ್‌ನ ಮಾಲೀಕನಾದ ಪ್ರತಿವಾದಿಯು, ವಾದಿಯು ದುಡ್ಡು ಕೊಡದೆ ಸಿನೆಮಾ ನೋಡುತ್ತಿರುವನು ಎಂಬ ತಪ್ಪು ಗ್ರಹಿಕೆಯಿಂದ ಅವನನ್ನು ಸಿನಿಮಾ ಮುಗಿಯುವ ಮೊದಲೇ ಹೊರಗಟ್ಟುವನು. ವಾದಿಯು ಪರಿಹಾರ ಬಯಸುವನು. ನಿರ್ಧರಿಸಿ.

Q. No. 9. (a) Discuss the salient features of Consumer Protection Act, 1986. Marks : 10

ಗ್ರಾಹಕ ಸಂರಕ್ಷಣೆಯ ಅಧಿನಿಯಮ, 1986ರ ಪ್ರಮುಖ ಲಕ್ಷಣಗಳನ್ನು ಚರ್ಚಿಸಿ.

Q. No. 9. (b) Write short notes on : Marks : 6

ಲಘು ಟಿಪ್ಪಣಿ ಬರೆಯಿರಿ :

Complaint.

ದೂರು.

Q. No. 10. (a) Explain the 'liability without fault' and application for compensation under Motor Vehicles Act, 1988. Marks : 10

ಮೋಟಾರು ವಾಹನಗಳ ಅಧಿನಿಯಮ, 1988 ರ ಅಡಿಯಲ್ಲಿ ''ಕ್ಷತಿಯಿಲ್ಲದ ಹೊಣೆಗಾರಿಕೆ '' ಹಾಗೂ ಪರಿಹಾರಕ್ಕಾಗಿ ಅರ್ಜಿಯ ಕುರಿತು ವಿವರಿಸಿ.

Q. No. 10. (b) Write short notes on : Marks : 6

ಲಘು ಟಿಪ್ಪಣಿ ಬರೆಯಿರಿ :

Consumer.

ಗ್ರಾಹಕ.